22. ಕಲ್ಯಾಗೇಟ
23. ವುಡುವೆಗೆರೆ
24. ತಿಮ್ಮಸಂದ್ರ
25. ಹುಚ್ಚಹನುಮೇಗೌಡನ ಪಾಳ್ಯ
26. ಪರಂಗಿಚಿಕ್ಕನ ಪಾಳ್ಯ
27. ತಗ್ಗಿಕುಪ್ಪೆ
28. ಕೆಂಚನಹಳ್ಳಿ
29. ಅಗಲಕೋಟೆ
30. ಹುಲುವೇನ ಹಳ್ಳಿ
31. ಚಕ್ರಬಾವಿ
32. ಮರಳುದೇವನಪುರ
33. ಕೆಂಪಸಾಗರ
34. ಮಾಯನಾಯ್ಕನಹಳ್ಳಿ
35. ಹಾಲಸಿಂಗನ ಹಳ್ಳಿ
36. ಸಾತನೂರು
37. ಬೆಟ್ಟನಹಳ್ಳಿ
38. ವರದೇನಹಳ್ಳಿ

ಮುಜರಾಯಿ ದೇವಾಲಯಗಳ ಅಭಿವೃದ್ಧಿ

121 (102) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮುಜರಾಯಿ ದೇವಾಲಯಗಳ ಸಂಖ್ಯೆ ಎಷ್ಟು ಅವು ಯಾವುವು; (ವಿವರ ನೀಡುವುದು)

ಆ) ಈ ದೇವಾಲಯಗಳಲ್ಲಿ ಹಲವಾರು ದೇವಾಲಯಗಳು ಸಂಪೂರ್ಣ ಹಾಳಾಗಿರುವುದು, ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ದೇವಾಲಯಗಳ ಅಭಿವೃದ್ಧಿ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗುವುದು;

ಇ) ಮಾಗಡಿ ತಾಲ್ಲೂಕಿನ ಶ್ರೀರಂಗನಾಥ ಸ್ವಾಮಿ ದೇವಾಲಯ, ತಿರುಮಲೆ ಹಾಗೂ ಶ್ರೀಸೋಮೇಶ್ವರ ಅಭಿವೃದ್ಧಿ ಕಾರ್ಯ ಯಾವಾಗ ಆರಂಭಿಸಲಾಗುವುದು?

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 43, 217 ಮುಜರಾಯಿ ದೇವಾಲಯಗಳಿವೆ.

ಆ) ಹೌದು, ಅನುದಾನ ಲಭ್ಯತೆಯನ್ನು ಅಧರಿಸಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುವುದು.

ಇ) ಮಾಗಡಿ ಟೌನಿನಲ್ಲಿರುವ ಶ್ರೀಸೋಮೇಶ್ವರ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಕಾರ್ಯ ಪ್ರಗತಿಯಲ್ಲಿದೆ. ಶ್ರೀ ರಂಗನಾಥ ಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರಪಡಿಸುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ.

ಬಾದಾಮಿ ಕ್ಷೇತ್ರದ ಅಂಗನವಾಡಿ ಶಿಕ್ಷಕರ ಕುರಿತು

122 (178) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ):- ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಮತ್ತು ಕ್ಷೇತ್ರದಲ್ಲಿರುವ ಒಟ್ಟು ಅಂಗನವಾಡಿಗಳು ಎಷ್ಟು; (ಗ್ರಾಮಗಳ ವಿವರ ನೀಡುವುದು)

ಆ) ಆ ಪೈಕಿ ಹಲವಾರು ಗ್ರಾಮಗಳಲ್ಲಿ ಆ ಶಿಕ್ಷಕರುಗಳು ಇಲ್ಲದೇ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ತೊಂದರೆ ನಿವಾರಿಸಲು ಸರ್ಕಾರದವರು ನಿರ್ದಿಷ್ಟವಾಗಿ ಕೈಗೊಂಡ ಕ್ರಮಗಳೇನು?

ಅ,ಆ) ಬಾದಾಮಿ ಮತ ಕ್ಷೇತ್ರದಲ್ಲಿ 184 ಅಂಗನವಾಡಿ ಕೇಂದ್ರಗಳು ಇರುತ್ತವೆ. ಗ್ರಾಮಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಬಾದಾಮಿ ವಿಧಾನಸಭಾ ಕ್ಷೇತ್ರದಲ್ಲಿ 11 ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳು ಖಾಲಿ ಇರುತ್ತವೆ. ಇದರಿಂದ ತೊಂದರೆಯಾಗಿರುವುದು ಇಲಾಖೆಯ ಗಮನಕ್ಕೆ ಬಂದಿರುತ್ತದೆ. ಈ ಖಾಲಿ ಇರುವ ಅಂಗನವಾಡಿ ಕೇಂದ್ರಗಳಲ್ಲಿ ನೆರೆಯ ಕೇಂದ್ರದ ಕಾರ್ಯಕರ್ತೆಯನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಲಾಗಿದೆ. ಇದರಿಂದ ತೊಂದರೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಲಾಗಿದೆ.

ಇ) ಕಾರ್ಯಕರ್ತೆಯರ ರಾಜೀನಾಮೆ, ಮರಣ, ಗೈರು ಹಾಜರಿ ಮುಂತಾದ ಕಾರಣಗಳಿಂದಾಗಿ ತೆರವಾಗಿರುವ ಅಂಗನವಾಡಿ ಕಾರ್ಯಕರ್ತೆಯರ ಹುದ್ದೆಗಳನ್ನು ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಭರ್ತಿ ಮಾಡುವಂತೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಪಂಚಾಯತ್‌ನ್ನು ದಿನಾಂಕ:29-11-1997ರಂದು ಕೋರಲಾಗಿದೆ.